154ನೇ ನಿ-330 = (99)
4KK
1108

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, ಸಿ.ಟಿ.ರವಿ, ಎಸ್.ವ್ಹಿ.ಸಂಕನೂರ, ಎನ್.ರವಿಕುಮಾರ್, ಶಶೀಲ್ ಜಿ. ನಮೋಶಿ ಹಾಗೂ ನಿರಾಣಿ ಹಣಮಂತ್ ರುದ್ರಪ್ಪ ಇವರುಗಳು ನಿಯಮ 330 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 99 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:**

**ವಿಷಯ :** ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ (RTPS) RTM & PCM2 ಈ ಎರಡು ವಿಭಾಗಗಳಿಂದ ರೂ.128.36 ಕೋಟಿ ಮೊತ್ತದ 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಗೆ ಆದೇಶ ನೀಡಿರುವುದು ಕಂಡು ಬಂದಿರುತ್ತದೆ. ಆದರೆ, ಸದರಿ 4 ಕಾಮಗಾರಿಗಳಲ್ಲಿ ಬಹುತೇಕ ಹೊಸ ಘಟಕಗಳನ್ನು ಮರು ನಿರ್ಮಾಣ ಮಾಡುತ್ತಿರುವುದು ಹಾಗೂ ಅಂದಾಜು ಪತ್ರಿಕೆಯಲ್ಲಿ ಅನಾವಶ್ಯಕ ಅಂಶಗಳು ಒಳಗೊಂಡಿರುವುದು ಹಾಗೂ ಕಾಮಗಾರಿಗಳ ಅಂದಾಜು ಮೊತ್ತವು ಅತೀ ಹೆಚ್ಚು ದರಗಳಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಹಾಗೂ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿಯೂ ಕೂಡ ಸುಮಾರು ರೂ.130 ಕೋಟಿಗೂ ಅಧಿಕ ಟೆಂಡರ್ ಆಹ್ವಾನಿಸಿ, ಕಾಮಗಾರಿ ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದು, ನಿಯಮಬಾಹಿರವಾಗಿದೆ. ಸದರಿ ಟೆಂಡರ್‌ಗಳನ್ನು single E ಟೆಂಡರ್ (ಇಂಟರ್ ನ್ಯಾಷನಲ್ ಕಾಂಪಿಟೇಟಿವ್ ಬಿಡ್ / ಲೋಕಲ್ ಕಾಂಪಿಟೇವ್ ಬಿಡ್) ಮೂಲಕ ಮಾಡಬೇಕಾಗಿರುತ್ತದೆ. ಆದರೆ, ಇವುಗಳನ್ನು ತುಂಡು ಗುತ್ತಿಗೆ ಮಾಡುವ ಮೂಲಕ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಲ್ಲಿದ್ದು, ಇಂತಹ ಸಂದರ್ಭದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮತ್ತು ತೀರಾ ಹಳೆಯದಾದ ಘಟಕವನ್ನು ಮಾತ್ರ ಕಾಮಗಾರಿಗೆ ಪರಿಗಣಿಸಿ ನಿಗಮದ ಆರ್ಥಿಕ ಹೊರೆಯನ್ನು ತಗ್ಗಿಸುವುದು ಅತೀ ಅವಶ್ಯಕವಾಗಿದೆ. ಆದ್ದರಿಂದ ಸದರಿ ಟೆಂಡರ್ ಮತ್ತು ಕಾಮಗಾರಿ ಆದೇಶಗಳನ್ನು ರದ್ದುಪಡಿಸಿ ಕಾಮಗಾರಿಗಳ ಅಂದಾಜು ದರಗಳನ್ನು ಮರು ಪರಿಶೀಲಿಸಿ ಅವಶ್ಯವಿರುವ ಕಾಮಗಾರಿಗಳಿಗೆ ಮಾತ್ರ ಪುನಃ ಟೆಂಡರ್ ಆಹ್ವಾನಿಸಿ, ಅಕ್ರಮಕ್ಕೆ ಕಡಿವಾಣ ಹಾಕಬೇಕೆಂಬ ವಿಷಯದ ಬಗ್ಗೆ ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ.

*****

**ಉತ್ತರ** :-

1.0 ಆರ್‌ಟಿಪಿಎಸ್ ನ 1 ರಿಂದ 4 ರವರೆಗಿನ ಘಟಕಗಳು 30 ವರ್ಷಗಳಿಗಿಂತ ಹೆಚ್ಚು ಮತ್ತು 5 ರಿಂದ 7 ಘಟಕಗಳು 22 ವರ್ಷಗಳಿಗಿಂತ ಹೆಚ್ಚು ಸೇವೆಯನ್ನು ಸಲ್ಲಿಸಿವೆ. ಆದ್ದರಿಂದ ಘಟಕಗಳನ್ನು ಬಲಪಡಿಸುವ ಮೂಲಕ ಜೀವಿತಾವಧಿಯನ್ನು ಮತ್ತಷ್ಟು ಅವಧಿಗೆ ಹೆಚ್ಚಿಸುವುದು ಅವಶ್ಯಕವಾಗಿರುತ್ತದೆ. ಘಟಕಗಳ ವಯಸ್ಸು (Age) ಈ ಕೆಳಗಿನಂತಿರುತ್ತದೆ.

| ಘಟಕ | ನಿರ್ಮಾಣದ ವರ್ಷ | 22.01.2024 ರಂತೆ ಘಟಕಗಳ ವಯಸ್ಸು (Age) |
|---|---|---|
| 1 | 1985 | 39 years |
| 2 | 1986 | 38 years |
| 3 | 1991 | 35 years |
| 4 | 1994 | 30 years |
| 5 & 6 | 1999 | 24 years |
| 7 | 2002 | 22 years |
| 8 | 2010 | 14 years |

2.0 ಸಿಇಎ ರವರು ಪತ್ರ ದಿ: 20.01.2023 ರಲ್ಲಿ ಎಲ್ಲಾ ವಿದ್ಯುತ್ ಯೋಜನೆಗಳಿಗೆ 2030 ರವರೆಗೆ ಯಾವುದೇ ಉಷ್ಣ ವಿದ್ಯುತ್ ಘಟಕಗಳನ್ನು ನಿವೃತ್ತಿಗೊಳಿಸದಂತೆ ಮತ್ತು ಅಗತ್ಯವಿದ್ದರೆ ಆರ್ & ಎಮ್ ಚಟುವಟಿಕೆಗಳನ್ನು ನಡೆಸಿದ ನಂತರ ಘಟಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಸಲಹೆ ನೀಡಿದೆ.

3.0 ಭಾರತ ಸರ್ಕಾರದ ಮಾನ್ಯ ವಿದ್ಯುತ್ ಹಾಗೂ (ಹೊಸ ಮತ್ತು ನವೀಕರಿಸಬಹುದಾದ) ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 21.11.2023 ರಂದು ಉಷ್ಣ ವಿದ್ಯುತ್ ಅಭಿವೃದ್ಧಿಗಾರರು ಮತ್ತು ಪಾಲುದಾರರೊಂದಿಗೆ ನಡೆದ ಸಭೆಯಲ್ಲಿ ಉಷ್ಣ ವಿದ್ಯುತ್ ಘಟಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಘಟಕಗಳ ಸಾಮರ್ಥ್ಯವನ್ನು ಕಾಪಾಡಿಕೊಳ್ಳಲು ಹಾಗೂ ಹಳೆಯ ಉಷ್ಣ ವಿದ್ಯುತ್ ಘಟಕಗಳನ್ನು ನಿವೃತ್ತಿ ಮಾಡುವ ಬದಲು, ರಾಜ್ಯಗಳು ಆರ್ & ಎಮ್ ಚಟುವಟಿಕೆಗಳನ್ನು ನಡೆಸಿ, ಘಟಕಗಳ ಜೀವಿತಾವಧಿಯನ್ನು ಮತ್ತಷ್ಟು ಅವಧಿಗೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

4.0 ಹವಾಮಾನದ ವೈಪರಿತ್ಯದ ಪರಿಣಾಮ, ನಿರಂತರ ಬಳಕೆ ಇತ್ಯಾದಿ ವಿವಿಧ ಅಂಶಗಳಿಂದ ಆರ್‌ಟಿಪಿಎಸ್ ನ ಘಟಕಗಳು ಶಿಥಿಲವಾಗುತ್ತಿವೆ. ಆದುದರಿಂದ ತುಕ್ಕು ಹಿಡಿದ/ ಹಾಳಾದ ಕಾಂಪೋನೆಂಟ್‌ಗಳನ್ನು ವೆಲ್ಡಿಂಗ್/ಬದಲಿಸುವ ಮೂಲಕ ಹಾಗೂ ಮರಳು ಬ್ಲಾಸ್ಟಿಂಗ್‌ನೊಂದಿಗೆ ಎಪಾಕ್ಸಿ ಪೇಂಟಿಂಗ್ ಒಳಗೊಂಡಂತೆ, ಸ್ಟ್ರಕ್ಚರಲ್ ಸ್ಟೀಲನ್ನು ಬಲಪಡಿಸುವ ಕಾರ್ಯದ ದುರಸ್ತಿ, ಇತ್ಯಾದಿಗಳನ್ನು ಅಗತ್ಯಕ್ಕನುಗುಣವಾಗಿ ತೆಗೆದುಕೊಳ್ಳಲಾಗಿದೆ. 2012 ರಿಂದ ಬಲವರ್ಧನೆ ಮತ್ತು ಪೇಂಟಿಂಗ್ ಅನ್ನು ಸಮಗ್ರವಾಗಿ ಒಳಗೊಂಡ ಯಾವುದೇ ಕೆಲಸವನ್ನು ಕೈಗೊಂಡಿರುವುದಿಲ್ಲ.

5.0 ಮುಂದುವರೆದು ಕಟ್ಟಡಗಳ ಕಾಂಪೋನೆಂಟ್‌ಗಳನ್ನು ಪರಿಶೀಲನೆ ಮಾಡಲಾಗಿ, ಹಲವು ಕಡೆ ತೆರೆದುಕೊಂಡ ವೆಲ್ಡಿಂಗ್ ಜಾಯಿಂಟ್‌ಗಳು, ಸ್ಟ್ರಕ್ಚರಲ್ ಸ್ಟೀಲ್‌ನ ತುಕ್ಕು ಹಿಡಿಯುವಿಕೆ ಕಂಡುಬಂದಿದ್ದು, ತುರ್ತು ದುರಸ್ತಿ ಕ್ರಮ ತಗೆದುಕೊಳ್ಳಲಾಗಿದೆ. ಮತ್ತು ಇತರ ಉಷ್ಣ ವಿದ್ಯುತ್ ಸ್ಥಾವರಗಳು ಘಟಕಗಳಿಗೆ ಸಮಗ್ರ ಬಲಪಡಿಸುವಿಕೆ ಮತ್ತು ಎಪಾಕ್ಸಿ ಪೇಂಟಿಂಗ್ ಕಾರ್ಯಗಳನ್ನು ಕೈಗೆತ್ತಿಕೊಂಡಿವೆ.

6.0 ಸ್ಟ್ರಕ್ಚರಲ್ ಸ್ಟೀಲ್ಗಳ ವಯಸ್ಸು ಮತ್ತು ಸ್ಥಿತಿಯನ್ನು ಪರಿಗಣಿಸಿ, ರಚನೆಗಳ ಮೇಲ್ಮೈಯನ್ನು ತಯಾರಿಸುವುದು/ದುರ್ಬಲ ಜಾಯಿಂಟ್‌ಗಳನ್ನು ಗುರುತಿಸಿ, ಮರಳು ಬ್ಲಾಸ್ಟಿಂಗ್‌ನೊಂದಿಗೆ ಎಪಾಕ್ಸಿ ಪೇಂಟಿಂಗ್, ತುಕ್ಕು ಹಿಡಿದ/ ಹಾಳಾದ ಕಾಂಪೋನೆಂಟ್‌ಗಳನ್ನು ವೆಲ್ಡಿಂಗ್/ಬದಲಿಸುವ ಮೂಲಕ ಸ್ಟ್ರಕ್ಚರಲ್ ಸ್ಟೀಲನ್ನು ಬಲಪಡಿಸುವುದು ಪ್ರಮುಖವಾಗಿದೆ. ಇದರಿಂದ ಸ್ಟ್ರಕ್ಚರಲ್ ಸ್ಟೀಲಗಳ ಜೀವಿತಾವಧಿಯು ವೃದ್ಧಿಯಾಗುತ್ತದೆ.

7.0 ಸ್ಟ್ರಕ್ಚರಲ್ ಸ್ಟೀಲ್‌ಗಳ ವೆಲ್ಡ್ ಜಾಯಿಂಟ್‌ಗಳಲ್ಲಿ ಮತ್ತು ತುಕ್ಕಿಗೆ ಒಳಗಾದ ಭಾಗಗಳಲ್ಲಿ, ವೈರ್ ಬ್ರಷ್‌ಅನ್ನು ಉಪಯೋಗಿಸಿ ರಚನೆಗಳ ಮೇಲ್ಮೈಯನ್ನು ತಯಾರಿಸುವುದು, ದುರ್ಬಲ ಜಾಯಿಂಟ್‌ಗಳನ್ನು ಗುರುತಿಸುವುದು ಪರಿಣಾಮಕಾರಿ ಯಾಗಿರುವುದಿಲ್ಲ. ಆದರೆ ಮರಳು ಬ್ಲಾಸ್ಟಿಂಗ್ ಅನ್ನು ಉಪಯೋಗಿಸಿದರೆ ರಚನೆಗಳ ತುಕ್ಕು, ಬಣ್ಣದ ಲೇಪನ ತೆಗೆಯುವುದು, ದುರ್ಬಲ ಜಾಯಿಂಟ್‌ಗಳ ಗುರುತಿಸುವಿಕೆ ಮತ್ತು ಅದಕ್ಕೆ ಸೂಕ್ತ ಪರಿಹಾರ ಅಂದರೆ ವೆಲ್ಡಿಂಗ್/ ಕಾಂಪೋನೆಂಟ್‌ಗಳನ್ನು ಬದಲಿಸುವುದು/ಬಲಪಡಿಸುವಿಕೆಯನ್ನು ನಿರ್ಧರಿಸಲು ಅನುವು ಮಾಡಿಕೊಡುತ್ತದೆ.

8.0 ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ನಿಗಮದ ಎಲ್ಲಾ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಸಂಬಂಧಿತ ಸಮಸ್ಯೆಗಳ ಬಗ್ಗೆ ಮತ್ತು ಸ್ಥಾವರಗಳ ಕಾರ್ಯಕ್ಷಮತೆಯನ್ನು ಅಧ್ಯಯನ ಮಾಡಲು ಭೇಟಿ ನೀಡಿದರು ಮತ್ತು 02.01.2024 ರಂದು ವರದಿಯನ್ನು ಸಲ್ಲಿಸಿದರು ಮತ್ತು ಈ ಕೆಳಗಿನ ಕ್ರಮಗಳನ್ನು ಶಿಫಾರಸ್ಸು ಮಾಡಿದರು.

ಬಿ) ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಸರಿಯಾದ ಸ್ವಚ್ಛತೆಯನ್ನು ಕಾಪಾಡುವುದರೊಂದಿಗೆ ಸ್ಟ್ರಕ್ಚರಲ್ ಕಾಂಪೋನೆಂಟ್‌ಗಳನ್ನು ಪ್ರತಿ 3 ರಿಂದ 5 ವರ್ಷಗಳಿಗೊಮ್ಮೆ ಸರಿಯಾದ ಪಾಲನೆ (ದುರಸ್ತಿ ಮತ್ತು ಪೇಂಟಿಂಗ್) ಯೊಂದಿಗೆ ಬಲಪಡಿಸುವ ಅವಶ್ಯಕತೆ ಇರುತ್ತದೆ.

ಸಿ) ಸರ್ಕಾರದ ಅಧಿಸೂಚನೆ ಸಂಖ್ಯೆ .LD 5 KABASE 2016, ಬೆಂಗಳೂರು, Dt:11.10.2017ರ ಪ್ರಕಾರ ಪ್ರತಿ 5 ವರ್ಷಗಳಿಗೊಮ್ಮೆ ಸರ್ಕಾರಿ ಅನುಮೋದಿತ ಏಜೆನ್ಸಿಗಳಿಂದ ಪ್ರಮುಖ ಸ್ಟ್ರಕ್ಚರಲ್ ಕಾಂಪೋನೆಂಟ್‌ಗಳಿಗೆ ಸ್ಥಿರತೆ ಪ್ರಮಾಣಪತ್ರವನ್ನು ಪಡೆಯುವುದು.

9.0 ಯುನಿಟ್ #1 ಬಂಕರ್ ಕುಸಿತದ ಬಗ್ಗೆ ವಿವರವಾದ ಅಧ್ಯಯನ ಮಾಡಲು ನಿಗಮವು Council of Scientific and Industrial Research (CSIR) – Structural Engineering Research Centre (SERC) ಅನ್ನು ನೇಮಿಸಿತು ಮತ್ತು ಅವರು ಸ್ಥಳಕ್ಕೆ ಭೇಟಿ ನೀಡಿ ಪ್ರಾಥಮಿಕ ವರದಿಯನ್ನು ಸಲ್ಲಿಸಿರುತ್ತಾರೆ. CSIR-SERC, Chennai ಸಂಸ್ಥೆಯು ಯುನಿಟ್ #1 ಬಂಕರ್ ಕುಸಿತದ ಕುರಿತು ಸಲ್ಲಿಸಿದ ವರದಿಯಲ್ಲಿ ಈ ಕೆಳಗಿನಂತೆ ಶಿಫಾರಸ್ಸು ಮಾಡಲಾಗಿದೆ.

ಎಲ್ಲಾ ಸ್ಟ್ರಕ್ಚರಲ್ ಸ್ಟೀಲ್‌ಗಳಿಗೆ ತುಕ್ಕು ಹಿಡಿಯುವಿಕೆಯನ್ನು ತಡೆಯಲು ಮತ್ತು ಜೀವಿತಾವಧಿಯನ್ನು ವಿಸ್ತರಿಸಲು ನಿಮಿತವಾಗಿ ಪೇಂಟಿಂಗ್ ಮಾಡುವುದು ಅವಶ್ಯಕವಾಗಿದೆ, ಇದಕ್ಕಾಗಿ ತುಕ್ಕಿಗೆ ಒಳಗಾದ ವೆಲ್ಡಿಂಗ್ ಜಾಯಿಂಟ್‌ಗಳಿಗೆ ಮತ್ತು ಸಂಪರ್ಕ ಪ್ರದೇಶಗಳಿಗೆ ತುರ್ತು ಕ್ರಮದ ಅಗತ್ಯವಿರುತ್ತದೆ.

10.0 ನಾನು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಇಂಧನ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರ ಜೊತೆ ದಿನಾಂಕ:26.06.2023 ರಂದು ಆರ್‌ಟಿಪಿಎಸ್ ಸ್ಥಾವರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಟ್ಟಡಗಳ ಸ್ಟೀಲ್ ಮತ್ತು ಆರ್‌ಸಿಸಿ ಕಾಂಪೋನೆಂಟ್‌ಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ಅವುಗಳ ಜೀವಿತಾವಧಿಯನ್ನು ಮತ್ತಷ್ಟು ಹೆಚ್ಚಿಸಲು ಪೇಂಟಿಂಗ್ & ಬಲಪಡಿಸುವಿಕೆಯಂತಹ ಅಗತ್ಯ ಕ್ರಮ ತಗೆದುಕೊಳ್ಳುವಂತೆ ಸೂಚಿಸಿರುತ್ತೇನೆ.

11.0 ಈ ನಿಟ್ಟಿನಲ್ಲಿ, ಸಿಇ(ಎಫ್‌ಎಂ)/ಇಡಿ(ಆರ್‌ಟಿಪಿಎಸ್) ಹಾಗು ಸಿಇ(ಸಿ)/ಇಡಿ(ಆರ್‌ಟಿಪಿಎಸ್) ರವರು ವಿವರವಾದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದು, ಮರಳು ಬ್ಲಾಸ್ಟಿಂಗ್‌ನೊಂದಿಗೆ ಎಪಾಕ್ಸಿ ಪೇಂಟಿಂಗ್, ತುಕ್ಕು ಹಿಡಿದ/ಹಾಳಾದ ಕಾಂಪೋನೆಂಟ್‌ಗಳನ್ನು ವೆಲ್ಡಿಂಗ್/ಬದಲಿಸುವ ಮೂಲಕ ಸ್ಟ್ರಕ್ಚರಲ್ ಸ್ಟೀಲನ್ನು ಬಲಪಡಿಸುವ ಕಾರ್ಯಗಳನ್ನು ಒಳಗೊಂಡಿರುತ್ತದೆ. ಅಂದಾಜು ಪಟ್ಟಿಯನ್ನು ಎಸ್‌ಇಆರ್‌ಒ(ಸಿ) ಮತ್ತು ಸಿಇಸಿಡಿ ರವರು ಪರಿಶೀಲಿಸಿರುವರು. ಅಂದಾಜು ಪಟ್ಟಿ ಹಾಗೂ ಕೆಲಸದ ವಿವರಗಳು ಕೆಳಗಿನಂತಿದೆ:

| ಘಟಕ | ಕೆಲಸದ ವಿವರಗಳು | ಅಂದಾಜು (ರೂ. ಕೋಟಿ) |
|---|---|---|
| CHP 1 | ಸಿಎಚ್‌ಪಿ ಗೆ ಸಂಬಂಧಿಸಿದ ವ್ಯಾಗನ್ ಟಿಪ್ಲರ್‌ಗಳು, ಕನ್ವೇಯರ್‌ಗಳು, ಜಂಕ್ಷನ್ ಟವರ್‌ಗಳು, ಬಂಕರ್ ಬೇ ಮತ್ತು ಕ್ರಷರ್ ಹೌಸ್ ಶೆಡ್‌ಗಳು | 24.25 |
| CHP 2 | ಸಿಎಚ್‌ಪಿ ಗೆ ಸಂಬಂಧಿಸಿದ ವ್ಯಾಗನ್ ಟಿಪ್ಲರ್‌ಗಳು, ಕನ್ವೇಯರ್‌ಗಳು, ಜಂಕ್ಷನ್ ಟವರ್‌ಗಳು, ಬಂಕರ್ ಬೇ ಮತ್ತು ಕ್ರಷರ್ ಹೌಸ್ ಶೆಡ್‌ಗಳು | 24.76 |
| 1 to 4 | ಘಟಕ 1 ರಿಂದ ಘಟಕ 4 ಕ್ಕೆ ಸಂಬಂಧಿಸಿದ ಟರ್ಬೈನ್ ಸ್ಟೀಲ್ ರಚನೆಗಳು, ಬಾಯ್ಲರ್ ಸ್ಟೀಲ್ ರಚನೆಗಳು, ಬಂಕರ್ ಸ್ಟೀಲ್ ರಚನೆಗಳು, ಮಿಲ್ ಪ್ರದೇಶ, ಇಎಸ್‌ಪಿ ಪ್ರದೇಶ, ಕೇಬಲ್ ಗ್ಯಾಲರಿ ಮತ್ತು ಪೈಪ್ ರ್‍ಯಾಕ್ ಗಳು | 38.13 |
| 5 to 8 | ಘಟಕ 5 ರಿಂದ ಘಟಕ 8 ರ ವರೆಗಿನ ಸಂಬಂಧಿಸಿದ ಟರ್ಬೈನ್ ಸ್ಟೀಲ್ ರಚನೆಗಳು, ಬಾಯ್ಲರ್ ಸ್ಟೀಲ್ ರಚನೆಗಳು, ಬಂಕರ್ ಸ್ಟೀಲ್ ರಚನೆಗಳು, ಮಿಲ್ ಪ್ರದೇಶ, ಇಎಸ್‌ಪಿ ಪ್ರದೇಶ, ಕೇಬಲ್ ಗ್ಯಾಲರಿ ಮತ್ತು ಪೈಪ್ ರ್‍ಯಾಕ್ ಗಳು | 41.22 |

12.0 ಅಂದಾಜು ಪಟ್ಟಿಯಲ್ಲಿ ಈ ಕೆಳಗಿನ ಐಟಮ್‌ಗಳನ್ನು ಪರಿಗಣಿಸಲಾಗಿದೆ ಮತ್ತು ಪರಿಗಣಿಸಲಾದ ದರಗಳು ಏಕರೂಪ ದರಪಟ್ಟಿ 2023-24 (Common SR) ರಂತೆ ಇರುತ್ತದೆ:

| ಕ್ರ. ಸಂ | ಕೆಲಸದ ವಿವರಗಳು | Common SR ದರ | CHP 1 | CHP 2 | Units 1 to 4 | Units 5 to 8 |
|---|---|---|---|---|---|---|
| 1 | ಸ್ಟ್ರಕ್ಚರಲ್ ಸ್ಟೀಲ್‌ಗಳನ್ನು ಮರಳು ಬ್ಲಾಸ್ಟಿಂಗ್‌ನಿಂದ ಸ್ವಚ್ಛಗೊಳಿಸುವುದು | 944.15 / ಚ.ಮೀ | 1,41,722 ಚ.ಮೀ<br>ರೂ.13.38 ಕೋಟಿ | 1,44,721.8 ಚ.ಮೀ<br>ರೂ.13.66 ಕೋಟಿ | 2,07,129 ಚ.ಮೀ<br>ರೂ.19.56 ಕೋಟಿ | 2,31,125 ಚ.ಮೀ<br>ರೂ.21.82 ಕೋಟಿ |
| 2 | ಸ್ಟ್ರಕ್ಚರಲ್ ಸ್ಟೀಲ್‌ಗಳಿಗೆ ಪ್ರೈಮರ್ ಸಹಿತ ಎರಡು ಕೋಟ್‌ಗಳ ಎಪೋಕ್ಸಿ ಪೇಯಿಂಟಿಂಗ್ | 297.40 / ಚ.ಮೀ | 2,36,205 ಚ.ಮೀ<br>ರೂ.7.03 ಕೋಟಿ | 2,41,203 ಚ.ಮೀ<br>ರೂ.7.17 ಕೋಟಿ | 3,94,214 ಚ.ಮೀ<br>ರೂ.11.72 ಕೋಟಿ | 4,06,287 ಚ.ಮೀ<br>ರೂ.12.08 ಕೋಟಿ |
| 3 | ಸ್ಟ್ರಕ್ಚರಲ್ ಸ್ಟೀಲ್‌ಗಳನ್ನು ಒದಗಿಸುವುದು | 148.10 / ಕೆಜಿ | 10,000 ಕೆಜಿಗೆ<br>ರೂ – 0.15 ಕೋಟಿ | 10,000 ಕೆಜಿಗೆ<br>ರೂ – 0.15 ಕೋಟಿ | 50,000 ಕೆಜಿಗೆ<br>ರೂ – 0.74 ಕೋಟಿ | 50,000 ಕೆಜಿಗೆ<br>ರೂ – 0.74 ಕೋಟಿ |
| 4 | ಜಿಎಸ್‌ಟಿ 18% ದರದಂತೆ | 18% | ರೂ.3.70 ಕೋಟಿ | ರೂ.3.78 ಕೋಟಿ | ರೂ. 5.82 | ರೂ. 6.29 ಕೋಟಿ |
| | **ಒಟ್ಟು (ರೂ. ಕೋಟಿ)** | | **24.25** | **24.76** | **38.13** | **41.22** |

13.0 ಟೆಂಡರ್ ಗಳ PQR ಗಳನ್ನು KTPP ಕಾಯ್ದೆಗಳ ಪ್ರಕಾರ ರೂಪಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿತು.

14.0 ಸಿಇ(ಸಿ)/ಇಡಿ(ಆರ್‌ಟಿಪಿಎಸ್) ಹಾಗೂ ಸಿಇ(ಎಫ್‌ಎಂ)/ಇಡಿ(ಆರ್‌ಟಿಪಿಎಸ್) ರವರು ನಿರೀಕ್ಷಿತ ಬಿಡ್ಡರ್ ಗಳ ಜೊತೆಯಲ್ಲಿ ಚರ್ಚಿಸಿದ ನಂತರ, Global e Tender ನ್ನು ಕರೆದರೆ, ಯಾವುದೇ ಬಿಡ್ಡರ್ ಗಳು KTPP ಕಾಯ್ದೆಗಳ PQR ಗಳಿಗೆ ಅರ್ಹರಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ಪ್ರಾಜೆಕ್ಟ್ ಕಾಂಟ್ರಾಕ್ಟ್ ಮ್ಯಾನೇಜ್‌ಮೆಂಟ್ ಗ್ರೂಪ್‌ನಲ್ಲಿ [PCMG] ಚರ್ಚಿಸಲಾಗಿದೆ ಮತ್ತು ವಿವರವಾದ ಚರ್ಚೆಯ ನಂತರ, ಸ್ಥಳಿಯ ಗುತ್ತಿಗೆದಾರರಿಗೆ ಅವಕಾಶ ನೀಡಲು, PCMG ಯು, ಪ್ರತ್ಯೇಕ 4 ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲು ನಿರ್ಧರಿಸಿತು.

15.0 ಅದರಂತೆ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರತ್ಯೇಕ 4 ಟೆಂಡರ್ ಗಳನ್ನು ಕರೆಯಲಾಯಿತು. ಈ ಕೆಳಗಿನ ಎರಡು / ಮೂರು ಬಿಡ್ಡುದಾರರು ಭಾಗವಹಿಸಿರುತ್ತಾರೆ.

ಅ) ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್
ಆ) ಪ್ರಿಯಾ ಟೆಕ್ ಕಂಪನಿ
ಇ) ಭವಾನಿ ಎರೆಕ್ಟರ್ಸ್ ಪ್ರೈವೇಟ್ ಲಿಮಿಟೆಡ್

M/s ಭವಾನಿ ಎರೆಕ್ಟರ್ಸ್ ಪ್ರೈವೇಟ್ ಲಿಮಿಟೆಡ್ ರವರನ್ನು PQR ಷರತ್ತುಗಳನ್ನು ಪೂರೈಸದ ಕಾರಣ ತಿರಸ್ಕರಿಸಲಾಗಿದೆ.

16.0 ಹಣಕಾಸು ಬಿಡ್ ಗಳ ವಿವರಗಳು ಈ ಕೆಳಗಿನಂತಿವೆ:

| | | | | | (ರೂ. ಕೋಟಿ) |
|---|---|---|---|---|---|
| **ಕ್ರ. ಸಂ** | **ಬಿಡ್ದುದಾರರು** | **CHP 1** | **CHP 2** | **Units 1 to 4** | **Units 5 to 8** |
| 1 | ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್ | 25.42 (L 1) | 25.95 (L 1) | 40.07 (L 1) | 43.23 (L 1) |
| 2 | ಪ್ರಿಯಾ ಟೆಕ್ ಕಂಪನಿ | 26.18 (L 2) | 26.74 (L 2) | 41.21 (L 2) | 44.49 (L 2) |

17.0 ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್ ರವರು ಟೆಂಡರ್ ದಾಖಲೆಗಳ PQR ಷರತ್ತುಗಳನ್ನು ಪೂರೈಸಿದ್ದು, ಅವರ ಕೆಲಸದ ಅನುಭವಗಳು, ಈ ಕೆಳಗಿನಂತಿವೆ:

- MAHAGENCO – Work of providing & applying Epoxy painting to structural steel work to Bunker bay and mill U#3 and U#4 Junction towers conveyors and allied structures at CSTPS Chandapur (September 2024)
- MAHAGENCO – Work of providing & applying Epoxy painting upto 90.00 mtr height to structural steel work in boiler area of U#4 U#5 and Cable and Pipe rack gallery area at BTPS Deepnagar (March 2022)
- NTPC Tamilnadu Energy Co Ltd – Work of Anti-corrosive painting of structures pipelines equipment of main plant off sites areas & Internal and External CHP and Sea water make up pump area (June 2022)
- Indian Oil Corporation Ltd – Work of Painting of Structure Equipment piping and other ancillary parts at various units of Paradip Refinery at Paradip Odisha (February 2020)

18.0 ಎಲ್-1 ಬಿಡ್ದುದಾರರೊಂದಿಗೆ ಸಂಧಾನ ಸಭೆ ನಡೆಸಲಾಗಿ, ಬಿಡ್ದುದಾರರು ತಾವು ನಮೂದಿಸಿದ ಮೊತ್ತದ ಮೇಲೆ ರಿಯಾಯಿತಿ ನೀಡಿರುತ್ತಾರೆ. ರಿಯಾಯಿತಿ ನಂತರ, ಮೊತ್ತವು ಈ ಕೆಳಗಿನಂತಿವೆ:

| | | | | | (ರೂ. ಕೋಟಿ) |
|---|---|---|---|---|---|
| **ಕ್ರ. ಸಂ** | **ಬಿಡ್ದುದಾರರು** | **CHP 1** | **CHP 2** | **Units 1 to 4** | **Units 5 to 8** |
| 1 | ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್ | 25.37 | 25.91 | 39.99 | 43.15 |

19.0 ಸದರಿ ವಿಷಯವನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ಮಂಡಿಸಲಾಗಿ, ಸಮಿತಿಯು ಸದರಿ ಕೆಲಸದ ಕಾರ್ಯದೇಶವನ್ನು ಎಲ್ 1 ಗುತ್ತಿಗೆದಾರರಾದ ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್ ರವರಿಗೆ ಅವರು ಅಂತಿಮವಾಗಿ ನಮೂದಿಸಿದ ಮೊತ್ತಕ್ಕೆ ನೀಡಲು ಶಿಫಾರಸ್ಸು ಮಾಡಿರುತ್ತದೆ.

20.0 298ನೇ ಮಂಡಳಿಯು, ಮೇಲಿನ ಪ್ರಸ್ತಾವನೆಗಳನ್ನು, ಕೆಲಸದ ಅವಶ್ಯಕತೆ, ಅಂದಾಜು ದರಗಳು, CSIR-SERC, Chennai ರವರ ವರದಿ ಮತ್ತು ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ನೀಡಿರುವ ವರದಿಗಳನ್ನು ಮತ್ತು ಗುತ್ತಿಗೆದಾರರ ದರಗಳನ್ನು ವಿವರವಾಗಿ ಚರ್ಚಿಸಿ, ಮೇಲಿನ ಪ್ರಸ್ತಾವನೆಗಳಿಗೆ ಕಾರ್ಯಾದೇಶ ನೀಡಲು ಅನುಮೋದಿಸಿರುತ್ತದೆ.

21.0 ನಂತರ, ಕಾರ್ಯಾದೇಶವನ್ನು, ಎಲ್ 1 ಗುತ್ತಿಗೆದಾರರಾದ ಎಸ್ ಪ್ರಿನ್ಸ್ ಹೈಟೆಕ್ ಪ್ರೈವೇಟ್ ಲಿಮಿಟೆಡ್ ಗೆ ನೀಡಲಾಗಿದ್ದು, ಪ್ರಸ್ತುತ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಈವರೆಗೂ 22.60% ಕೆಲಸವನ್ನು ಗುತ್ತಿಗೆದಾರರು ಮಾಡಿರುತ್ತಾರೆ. ಈ ಕೆಲಸವು, ಸಿಇ(ಸಿ)/ಇಡಿ(ಆರ್‌ಟಿಪಿಎಸ್) ಹಾಗು ಸಿಇ(ಎಫ್‌ಎಂ)/ಇಡಿ(ಆರ್‌ಟಿಪಿಎಸ್) ರವರ ಸುಪರ್ತಿಯಲ್ಲಿ ನಿರ್ವಹಿಸುತ್ತಿದ್ದಾರೆ ಹಾಗು ಕೆಲಸದ ಒಟ್ಟು ಸಮಯ 15 ತಿಂಗಳಾಗಿರುತ್ತದೆ.

22.0 ಆದ್ದರಿಂದ, ಕರ್ನಾಟಕ ವಿದ್ಯುತ್ ನಿಗಮವು, ಕೆಲಸದ ಅವಶ್ಯಕತೆ, CSIR-SERC, Chennai ರವರ ವರದಿ, ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ನೀಡಿರುವ ವರದಿ ಹಾಗೂ ಅಂದಾಜು ಪಟ್ಟಿಯಲ್ಲಿ ಪರಿಗಣಿಸಲಾದ ದರಗಳು ಏಕರೂಪ ದರಪಟ್ಟಿ 2023-24 (Common SR) ಒಳಪಟ್ಟು, KTPP ಕಾಯಿದೆಯನ್ನು ಅನುಸರಿಸಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆದು, ಎಲ್ 1 ಗುತ್ತಿಗೆದಾರರ ಸಾಮರ್ಥ್ಯ ಹಾಗು ಅನುಭವವನ್ನು ಪರಿಗಣಿಸಿ, ಎಲ್ 1 ಗುತ್ತಿಗೆದಾರರಿಗೆ, ನಿರ್ದೇಶಕ ಮಂಡಳಿಯ ಅನುಮತಿ ಪಡೆದು, ಕಾರ್ಯಾದೇಶ ನೀಡಿರುತ್ತದೆ.

ಸಂಖ್ಯೆ: ಎನರ್ಜಿ 299 ಪಿಪಿಎಂ 2024

(ಕೆ.ಜೆ.ಜಾರ್ಜ್) 7/8/25
ಇಂಧನ ಸಚಿವರು